ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ : 211 (1702)
2. ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 14/03/2022.
4. ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	2020ರ ಜುಲೈ ಮತ್ತು ಸೆಪ್ಟೆಂಬರ್‌ನಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅಸಮರ್ಪಕ ಮೌಲ್ಯ ಮಾಪನ ಮಾಡಿದ ಮೌಲ್ಯ ಮಾಪಕರಿಂದ ವಸೂಲು ಮಾಡಿದ ದಂಡದ ಮೊತ್ತವೆಷ್ಟು; ಇನ್ನು ಎಷ್ಟು ದಂಡದ ಮೊತ್ತವನ್ನು ವಸೂಲು ಮಾಡಬೇಕಾಗಿದೆ; ಯಾವಾಗ ವಸೂಲು ಮಾಡಲಾಗುವುದು;	2020 ರ ಜುಲೈ ಮತ್ತು ಸೆಪ್ಟಂಬರ್ ಮಾಹೆಯಲ್ಲಿ ನಡೆದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಅಸಮರ್ಪಕ ಮೌಲ್ಯಮಾಪನ ಮಾಡಿದ ಶಿಕ್ಷಕರುಗಳ ಸಂಖ್ಯೆ 4317 ಇರುತ್ತದೆ. ಈ ರೀತಿ ಅಸಮರ್ಪಕ ಮೌಲ್ಯ ಮಾಪನ ಮಾಡಿದ ಒಟ್ಟು 4317 ಶಿಕ್ಷಕರುಗಳಿಗೆ ಅಂಕಗಳ ವ್ಯತ್ಯಾಸದ ಅನುಸಾರ ರೂ.51,26,600 ಗಳ ದಂಡವನ್ನು ವಿಧಿಸಲಾಗಿದೆ. ಈ ದಂಡದ ಮೊತ್ತದಲ್ಲಿ ಈವರೆಗೆ ರೂ. 10,56,400/- ಗಳು ವಸೂಲಾಗಿದ್ದು, ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಶಾಲೆಗಳು 2020-21ನೇ ಸಾಲಿನಲ್ಲಿ ಮುಚ್ಚಲ್ಪಟ್ಟಿದ್ದ ಕಾರಣದಿಂದ ದಂಡ ವಸೂಲಾತಿಯ ಪ್ರಮಾಣವು ಕಡಿಮೆಯಾಗಿರುತ್ತದೆ. ಬಾಕಿ ದಂಡದ ಮೊತ್ತವನ್ನು ವಸೂಲು ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ: 1. 2019-20 ನೇ ಸಾಲಿನಲ್ಲಿ ಕೋವಿಡ್-19 ಹಿನ್ನೆಲೆಯಲ್ಲಿ ಪರೀಕ್ಷೆಗಳು ವಿಳಂಬವಾಗಿದ್ದು ಪರೀಕ್ಷಾ ಕಾರ್ಯಗಳ ನಂತರ ದಂಡ ವಸೂಲಾತಿಗೆ ಕ್ರಮವಹಿಸಲಾಗಿದೆ. ಶಾಲಾ ಮುಖ್ಯ ಶಿಕ್ಷಕರ ಲಾಗಿನ್‌ಗಳಿಗೆ ಶಿಕ್ಷಕರವಾರು ದಂಡದ ವಿವರವನ್ನು ಅಪ್‌ಲೋಡ್ ಮಾಡಲಾಗಿದ್ದು ಶಿಕ್ಷಕರಿಂದ ವಸೂಲು ಮಾಡಿ ಮಂಡಳಿಗೆ ಪಾವತಿಸಲು ಆಯಾ ಶಾಲಾ ಮುಖ್ಯ ಶಿಕ್ಷಕರುಗಳಿಗೆ ಸೂಚಿಸಲಾಗಿದೆ. 2. ಜಿಲ್ಲಾ ಉಪನಿರ್ದೇಶಕರ ವಿಡಿಯೋ ಸಂವಾದಗಳು, ಟೆಲಿ ಕಾನ್ಫರೆನ್ಸ್‌ಗಳು ಮತ್ತು ನೋಡಲ್ ಅಧಿಕಾರಿಗಳ ಸಭೆಯಲ್ಲಿ ವಸೂಲಾತಿಗೆ ಕ್ರಮವಹಿಸಲು ಸೂಚಿಸಲಾಗಿದೆ. 3. ಜಿಲ್ಲಾವಾರು ಬಾಕಿ ವಸೂಲು ಮಾಡಬೇಕಾಗಿರುವ ಮೊತ್ತದ ವಿವರವನ್ನು ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರಿಗೆ ನೀಡಿ ವಸೂಲಾತಿಗೆ ಸೂಚಿಸಲು ಕ್ರಮವಹಿಸಲಾಗುತ್ತಿದೆ.

ಆ)	ಅಸಮರ್ಪಕ ಮೌಲ್ಯ ಮಾಪನ ಮಾಡಿದ ಕಾರಣ ವಿನಾಕಾರಣ ತೊಂದರೆಗೆ ಒಳಗಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಆ ವಿದ್ಯಾರ್ಥಿಗಳಿಗೆ ಯಾವ ರೀತಿಯ ಪರಿಹಾರ ನೀಡಲಾಗಿದೆ;	➢ ಮರುಮೌಲ್ಯಮಾಪನಕ್ಕೆ ಒಟ್ಟು ಸ್ವೀಕೃತವಾದ 19826 ಅರ್ಜಿಗಳ ಪೈಕಿ 06 ಕ್ಕಿಂತ ಕಡಿಮೆ ಅಂಕ ವ್ಯತ್ಯಾಸವಾಗಿರುವ ಪ್ರಕರಣಗಳು 15591 ಸಂಖ್ಯೆಯಲ್ಲಿದ್ದು ಮಕ್ಕಳಿಗೆ ಯಾವುದೇ ತೊಂದರೆಯಾಗದಂತೆ ಅಂಕಗಳನ್ನು ಸರಿಪಡಿಸಲಾಗಿದೆ. ➢ 06 ಕ್ಕಿಂತ ಹೆಚ್ಚು ಅಂಕ ವ್ಯತ್ಯಾಸವಿರುವ ಪ್ರಕರಣಗಳು 4235 ಸಂಖ್ಯೆಯಲ್ಲಿರುತ್ತದೆ. ಈ ರೀತಿಯ ವ್ಯತ್ಯಾಸಗಳನ್ನು ಮರು ಮೌಲ್ಯಮಾಪನದಲ್ಲಿ ಸರಿಪಡಿಸಲಾಗಿದೆ. ಈ ರೀತಿ ಅಸಮರ್ಪಕ ಮೌಲ್ಯಮಾಪನ ಮಾಡಿರುವ ಮೌಲ್ಯಮಾಪಕರುಗಳಿಗೆ ದಂಡ ವಿಧಿಸಲು ಕ್ರಮವಹಿಸಲಾಗಿದೆ. ➢ 06 ಕ್ಕಿಂತ ಹೆಚ್ಚು ಅಂಕ ವ್ಯತ್ಯಾಸವಾಗಿರುವ ವಿದ್ಯಾರ್ಥಿಗಳಿಗೆ ಪ್ರತಿ ವಿಷಯಕ್ಕೆ ರೂ. 805/-ಗಳ ಶುಲ್ಕವನ್ನು ಸಹ ಮರುಭರಣ ಮಾಡಲಾಗಿದೆ.
ಇ)	ಅಸಮರ್ಪಕ ಮೌಲ್ಯ ಮಾಪನ ಮಾಡಿದ ಕಾರಣ ಕಡಿಮೆ ಅಂಕ ಬಂದ ಕಾರಣಕ್ಕಾಗಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡರೆ ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ; ಅಸಮರ್ಪಕ ಮೌಲ್ಯ ಮಾಪನ ಮಾಡಿದವರ ಮೇಲೆ ಕ್ರಿಮಿನಲ್ ಕೇಸು ದಾಖಲಿಸುವ ಕುರಿತು ಸರ್ಕಾರದ ನಿಲುವೇನು?	ಅಸಮರ್ಪಕ ಮೌಲ್ಯಮಾಪನದ ಕಾರಣದಿಂದಾಗಿ ಯಾವುದೇ ಆತ್ಮಹತ್ಯೆ ಪ್ರಕರಣಗಳು ಸರ್ಕಾರಕ್ಕೆ ವರದಿಯಾಗಿರುವುದಿಲ್ಲ.

ಸಂಖ್ಯೆ: ಇಪಿ 60 ಎಸ್ಎಲ್‌ಬಿ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು